

ಸೂಜಿ ತೂರಿಸಿಕೊಂಡು ನಲುಗಿದ್ದ ನನ್ನ ಶ್ರವಣೇಂದ್ರಿಯಗಳು ಎರಡನೇ ಬಾರಿ ಸೂಜಿಯ ಸ್ಪರ್ಶಕ್ಕೆ ನರಳಿದವು. ನಂತರ ದೊಡ್ಡ ಓಲೆ ಜುಮುಕಿಯನ್ನು ಬಟನ್‌ನೊಂದಿಗೆ ಧರಿಸಿದರೆ ಸ್ಟಿಫ್ ಆಗಿ ಕೂರುವುದೆಂದು ವಿಡಿಯೋದಲ್ಲಿ ಸೂಚನೆ ನೀಡಿದ್ದರು. ಅದರಂತೆ ಓಲೆ ಧರಿಸಿದೆ.

ಕನ್ನಡಿಯ ಮುಂದೆ ನಿಂತಾಗ ದಿಗ್ಭ್ರಾಂತಳಾದೆ. ಜಗ್ಗುತ್ತಿದ್ದ ಕಿವಿಯ ಭಾಗ ಮೇಲಕ್ಕೆ ಸೆಟೆದು ನಿಂತು ನನ್ನ ಎರಡೂ ಕಿವಿಗಳೂ ಬಟ್ಟಲಿನಂತಾಗಿದ್ದವು. ಪುಣ್ಯಕ್ಕೆ ನನ್ನೀ ಅವತಾರವನ್ನು ನೋಡಲು ಮನೆಯವರು ಯಾರೂ ಇರಲಿಲ್ಲ. ಬಟ್ಟಲುಗಣ್ಣುಗಳ ವರ್ಣನೆಯನ್ನು ಕೇಳಿದ್ದ ನನಗೆ ಬಟ್ಟಲು ಕಿವಿಗಳನ್ನು ನೋಡುವ ಭಾಗ್ಯ ಲಭಿಸಿತು. ಕೊನೆಯ ಬಾರಿಗೆ ನನ್ನ ಸೌಂದರ್ಯವನ್ನು ಕನ್ನಡಿಯಲ್ಲಿ ನೋಡಿ ಜುಮುಕಿಯೊಂದಿಗಿನ ನನ್ನ ನಿವೃತ್ತಿಯನ್ನು ಘೋಷಿಸಿದೆ. ನಂತರ ಜುಮುಕಿಯನ್ನು ಕಳಚಿ ಅದೇ ವಿಷಾದ ಭಾವದಿಂದ ಆಲೆಯ ಹಿಂಭಾಗವನ್ನು ಅಪ್ಪಿ ಹಿಡಿದಿದ್ದ ಬ್ಯಾಂಡೇಡನ್ನು ಪರ್‍ರನೆ ಎಳೆದೆ. ಚುರು ಚುರು ಎನ್ನುತ್ತಿದ್ದ ಕಿವಿಯ ಭಾಗದಲ್ಲಿ ಒದ್ದೆಯ ಅನುಭವವಾಯಿತು. ಮೆಲ್ಲನೆ ಮುಟ್ಟಿದವಳೇ ಬೆಚ್ಚಿದೆ. ಕಿವಿಯ ಹಿಂಭಾಗದಿಂದ ಧಾರಾಕಾರವಾಗಿ ರಕ್ತ ಸುರಿಯುತ್ತಿತ್ತು.

ವೈದ್ಯರ ಮುಂದೆ ವಿಧೇಯಳಾಗಿ ಕುಳಿತಿದ್ದೆ. ನನ್ನ ವಿವರಗಳನ್ನೆಲ್ಲಾ ಕೂಲಂಕಷವಾಗಿ ಆಲಿಸಿದ ವೈದ್ಯರು ಯಾವುದೋ ಅನ್ಯಗ್ರಹ ಜೀವಿಯನ್ನು ಕಂಡಂತೆ ನನ್ನನ್ನೊಮ್ಮೆ ನೋಡಿದರು. ಸಾಕಷ್ಟು ಕಟು ಬೈಗುಳಗಳನ್ನೆದುರಿಸಲು ತಯಾರಾಗಿಯೇ ಹೋಗಿದ್ದ ನನಗೆ ಅವರ ಆ ನೋಟ, ಅದೆಲ್ಲದಕ್ಕಿಂತಲೂ ಹೆಚ್ಚೆನಿಸಿತು. ಮಾತಿಲ್ಲದೆ ಮುಲಾಮು ಬಳಿದ ವೈದ್ಯರು ನಿಜವಾದ ಬ್ಯಾಂಡೇಜನ್ನು ಕಾಟನ್ನಿನೊಂದಿಗೆ ಸುತ್ತಿ ಕೆಲವೊಂದು ಮಾತ್ರೆ ನೀಡಿ ಕಳಿಸಿದರು. ಎರಡು ದಿನಗಳ ನಂತರ ಮತ್ತೆ ಬಂದು ಡ್ರೆಸ್ಸಿಂಗ್ ಮಾಡಿಸಿಕೊಂಡು ಹೋಗುವಂತೆ ತಿಳಿಸಿದರು. ಜುಮುಕಿಗಿಂತಲೂ ದೊಡ್ಡದಾಗಿಯೂ ಭಾರವಾಗಿಯೂ ಇದ್ದ ಬ್ಯಾಂಡೇಜ್ ಹೊತ್ತು ನನ್ನ ಹೊಸ ಅವತಾರದೊಂದಿಗೆ ಮನೆಗೆ ಬಂದೆ. ಎಲ್ಲಾ ಪೂರ್ತಿಯಾಗಿ ಹುಷಾರಾಗಲು ಹದಿನೈದು ದಿನ ಹಿಡಿಯಿತು. ಈ ಹದಿನೈದು ದಿನಗಳಲ್ಲಿ ಗಾಯದ ಬೇನೆಗಿಂತಾ ಮನೆಯವರ ಕುಹಕ, ಹೊರಗಿನವರ ಕೌತುಕವನ್ನೆಲ್ಲಾ ಎದುರಿಸಿ, ವಿವರಿಸಿ, ಜೀವನದಲ್ಲಿ ಜುಮುಕಿಯನ್ನು ಕನಸಿನಲ್ಲಿಯೂ ನೆನೆಯಬಾರದೆಂದು ನಿರ್ಧರಿಸಿದೆ.

ದಿನಕಳೆದಂತೆ ಗಾಯ ಸಂಪೂರ್ಣವಾಗಿ ಗುಣವಾಗಿ ನಂತರ ಬರೀ ಖಾಲಿ ಕಿವಿಯಲ್ಲಿರುವ ಬದಲು ಎರಡೂ ಕಿವಿಗೆ ಕೆಂಪು ಬಣ್ಣದ ರೌಂಡ್ ಬಿಂದೀಸ್ ಇಡಲು ಪ್ರಾರಂಭಿಸಿದೆ. ಅದು ಬಹಳ ಜನರನ್ನು ಆಕರ್ಷಿಸಿತು. ಎಲ್ಲರೂ 'ಇದೇ ನಿಮಗೆ ಚೆನ್ನಾಗಿ ಕಾಣುತ್ತದೆ' ಎನ್ನತೊಡಗಿದರು. ಹೊಗಳಿಕೆಯಿಂದ ನನ್ನ ಸೃಜನಶೀಲತೆ ಜಾಗೃತಗೊಂಡು ಆ ಬಿಂದೀಸ್ ಮೇಲೆ ಸ್ವಲ್ಪ ಫ್ಯಾಬ್ರಿಕ್ ಗಮ್ ಹಾಕಿ ಅದೇ ಅಳತೆಯ ಬಣ್ಣ ಬಣ್ಣದ ಕುಂದನ್‌ಗಳನ್ನು ಅಂಟಿಸಿ ಧರಿಸಲು ಪ್ರಾರಂಭಿಸಿದೆ. ಇದು ಇನ್ನೂ ಹೆಚ್ಚಿನವರನ್ನು ಆಕರ್ಷಿಸಿತು.

ಇತ್ತೀಚೆಗೆ ಯಾವ ಮದುವೆ ಸಮಾರಂಭಗಳಿಗೆ ಹೊರಟರೂ ಅಗಲವಾದ ಬಿಂದಿಗೆ ನನ್ನ ಸೀರೆಯ ಬಣ್ಣದ ಸ್ಟೋನ್ಸ್ ಅಂಟಿಸಿ ಧರಿಸಿ ಸಂತೋಷಪಡುವುದನ್ನು ರೂಢಿಸಿಕೊಂಡೆ. ಇದರಿಂದ ನನ್ನ ಫ್ಯಾನ್ ಫಾಲೋವರ್ಸ್ ಹೆಚ್ಚಾದರು. ಮೊನ್ನೆ ಯಾವುದೋ ಸಮಾರಂಭದಲ್ಲಿ ನನ್ನ ಕ್ರಿಯೇಟಿವ್ ಕರ್ಣಾಭರಣವನ್ನು ಕಂಡು ಗೆಳತಿಯೊಬ್ಬಳು 'ನೀವ್ಯಾಕೆ ಇದರ ಬಗ್ಗೆ ಡೀಟೈಲಾಗಿ ಒಂದು ವಿಯೊ ಮಾಡಿ ಯೂಟ್ಯೂಬ್‌ನಲ್ಲಿ ಬಿಡಬಾರದು' ಎಂದಾಗ ನಿಜಕ್ಕೂ ಸ್ಮೃತಿ ತಪ್ಪಿದಂತಾಯ್ತು.

ಪ್ರತಿಕ್ರಿಯಿಸಿ: **feedback@sudha.co.in**